ಶ್ರೀ ಎಸ್. ಗೋಪಾಲ ಗೌಡ.—ಈ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ಕೊಡಲಲ್ಲ. ಕಳೆದ ವರ್ಷ ಕೂಡ ಒಂದು ತಿದ್ದುಪಡಿತಂದಿತು. ಈಗಿರುವ ಪರಿಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು ಅನ್ನತಕ್ಕಂಥ ಒಂದು ತಿದ್ದುಪಡಿಯನ್ನು ನಾವು ಒಪ್ಪಿಕೊಂಡಿದ್ದೆವು. ಪುನಃ ಅದೇ ರೀತಿಯಲ್ಲಿ ಮುಂದುವರಿಯಬೇಕೆಂದು ಮತ್ತೆ ತಿದ್ದುಪಡಿಯನ್ನು ತಂದಿದ್ದಾರೆ. ಇದು ಬಹಳ ದುರ ದೃಷ್ಟಕರವಾದ ವಿಷಯ. ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಕ್ಷವಾಗಿದ್ದು, ಇಂಥ ಮುಖ್ಯವಾದ ಒಂದು ಸೂಧಾರಣೆಯ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ ಏನೇ ರಾಜ್ಯಾಂಗದ ವಿರೋಧ, ಅಡ್ಡಿ ಬಂದಿದೆಯೆಂದು ಹೇಳುತ್ತಾರೆ. ಉಚ್ಚ ನ್ಯಾಯಾಲಯ, ಶ್ರೇಷ್ಠ ನ್ಯಾಯಾಲಯ ತೀರ್ಮಾನ ಕೊಟ್ಟ ಮೇಲೂ ಕೂಡ, ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಇರುವುದು, ಅವರಿಗೆ ರೈತನ ಬಗ್ಗೆ ಹಾಗೂ ಭೂಸುಧಾರಣೆಯ ಬಗ್ಗೆ ಇರತಕ್ಕಂಥ ದ್ವಂದ್ವ, ತಾತ್ಸಾರ ಎತ್ತಿ ತೋರಿಸತಕ್ಕಂಥ ದೊಡ್ಡ ಸಾಕ್ಷ್ಯವಾಗಿದೆ. ಗುಲ್ಜಾರಿಲಾಲ್ ನಂದಾರವರು, ಭೂಸುಧಾರಣೆಗಳು ಇನ್ನೂ ತೀವ್ರವಾಗಿ ಆಗಬೇಕು ಎಂದು ಹೇಳುತ್ತಾರೆ. ಆದರೆ ಕಾಂಗ್ರೆಸ್ ನಲ್ಲಿರತಕ್ಕಂಥ ದೊಡ್ಡ ದೊಡ್ಡ ಜಮೀನುದಾರರು ತಮ್ಮ ಪ್ರಭಾವವನ್ನು ಅನುಚಿತವಾಗಿ ಸರ್ಕಾರದ ಮೇಲೆ ಮತ್ತು ಸದಸ್ಯರ ಮೇಲೆ ಬೀರಿ, ಈ ಪರಿಸ್ಥಿತಿ ಹೀಗೆಯೇ ಇರಲಿ, ಹೀಗೆಯೇ ಮುಂದುವರಿಯಲಿ ಎಂದು ಒಂದು ದೊಡ್ಡ ಸಂಚನ್ನು ನಡೆಸಿಕೊಂಡು ಬರುತ್ತಾ ಇದ್ದಾರೆ. ಈ ವೇಳೆಯಲ್ಲಿ ಈ 15 ವರ್ಷಗಳಲ್ಲಿ ಬಹಳ ಜನ ಗೇಣಿದಾರ ರೈತರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು, ಜಮೀನಿನಿಂದ ಹೊರಗೆ ಹಾಕಲ್ಪಟ್ಟ, ಬಲಾತ್ಕಾರವಾಗಿ ಹೊರಗೆ ಹೋಗುವಂಥ ಪರಿಸ್ಥಿತಿ ಬಂದಿದೆ? ಅವರು ಇವತ್ತು ಬಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಈ ಮನೂದೆ ಜಾರಿಗೆ ಕೊಡುವುದು ತಡವಾದಷ್ಟೂ, ಪ್ರತಿದಿವಸ ಈ ಸಮಸ್ಯೆ ಉಲ್ಬಣವಾಗಿ ಬೇರೆ ಬೇರೆ ರೂಪವನ್ನು ತಾಳುತ್ತಿದೆ. ಅದನ್ನು ಬಗೆಹರಿಸದೆ ಮಾನ್ಯಮಂತ್ರಿಗಳು, ಈ ತಿದ್ದುಪಡಿಯನ್ನು ತರಬೇಕಾಗಿದೆಯೆಂದು ಹೇಳುತ್ತಾರೆ. ಪ್ಲಾನಿಂಗ್ ಕಮಿಷನ್ನಿನವರು ಸೂಚಿಸಿದ್ದಾರೆಂದು ಹೇಳುವುದು ಬಹಳ ಶೋಚನೀಯವಾದ ವಿಷಯ. ಒಂದು ಕಾನೂನನ್ನು ಈ ಮಾನ್ಯ ಸಭೆ ಕಾನೂನಾಗಿ ಮಾಡಿದೆ. ಸರ್ಕಾರ ಅದನ್ನು ಯಾಪ ಕಾರಣಕ್ಕಾಗಿ ಜಾರಿಗೆ ಕೊಡುತ್ತಿಲ್ಲ? ಅದು ಹೀಗೆಯೇ ಮತ್ತೆ ತಿದ್ದುಪಡಿಗಾಗಿ ಬರುತ್ತಿದೆ. ಇದು ಏನು ತೋರಿಸುತ್ತಿದೆಯೆಂದರೆ ಈ ದೇಶದಲ್ಲಿ ಪ್ರಜಾಭುತ್ವದಲ್ಲಿ ಯಾರಿಗಾದರೂ ಏನಾದರೂ ಅಲ್ಪಸ್ವಲ್ಪ ವಿಶ್ವಾಸ ಉಳಿದಿದ್ದರೆ—(ಬುದ್ಧಿವಂತರಿಗೆ ಕೂಡ) ವಿಚಾರಪರರೆನಿಸಿಕೊಂಡವರಿಗೆ, ಸ್ವಲ್ಪ ವಿಚಾರ ಮಾಡತಕ್ಕಂಥವರಿಗೆ ವಿಶ್ವಾಸವಿದ್ದರೆ, ಅದು ಅವರಿಗೆ ಹೋಗುವುದರಲ್ಲ ಎನೂ ಸಂದೇಹವಿಲ್ಲ. ಮೊದಲೇ ಪ್ರಜಾಭುತ್ವದಲ್ಲ ಅಡ್ಡಿ ಆತಂಕಗಳಿರುತ್ತವೆ ತಡವಾಗುತ್ತದೆ. ತಕ್ಷಣ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಆರ್ಡಿನೆನ್ಸ್ ಬಿಟ್ಟು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಷ್ಟೆಲ್ಲಾ ಕಷ್ಟವಿದ್ದೂ, ಮನೂದೆಮಾಡಿ ಜಾರಿಗೆ ಕೊಡದೆ ಇಷ್ಟು ವಿಳಂಬ ಮಾಡುವುದಾದರೆ ಈ ಮನೂದೆಯಿಂದ ಇನ್ನು ಏನು ಸಾಧಕವಾಗುತ್ತದೆ? ಇದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ. Status quo ಮುಂದುವರಿಸಬೇಕೆಂದು ಹೇಳುತ್ತಾರೆ. ಇವತ್ತಿನ ದಿವಸ ಹಳ್ಳಿಯಲ್ಲ ಏನು ಪರಿಸ್ಥಿತಿ ಇದೆ? ಅಲ್ಲ ರೈತರಿಗೆ (ಗೇಣಿದಾರರಿಗೆ) ಮತ್ತು ಜಮೀನುದಾರರಿಗೆ ಎಷ್ಟೋ ರೀತಿಯ ವಿವಾದಗಳು ನಡೆಯುತ್ತಾ ಇವೆ; ಎಷ್ಟೋ ಜನರ ಮೇಲೆ ಬಲಾತ್ಕಾರ ನಡೆಯುತ್ತಾ ಇದೆ. ಅಲ್ಲ ಅಷ್ಟು ಕಳವಳಕರ ಪರಿಸ್ಥಿತಿ ಉಂಟಾಗಿದೆ. ಅದನ್ನೆಲ್ಲಾ ಅರ್ಥಮಾಡಿಕೊಳ್ಳ ದೇನೇ ಹೆಚ್ಚು ಬೆಳೆ ಬೆಳೆಯಬೇಕು, ದೇಶದಲ್ಲ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕು ಎಂಬ ತಮ್ಮ ದೊಡ್ಡ ಮಾತುಗಳೆಲ್ಲಾ ಈ ಸನ್ನಿವೇಶದಲ್ಲ ಅರ್ಥ ಶೂನ್ಯ ಮತ್ತು ವಿಫಲ. ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಹಾಗೆ ಹೇಳುವುದರ ಜೊತೆಗೆ ಸ್ವಲ್ಪ ಮಾತುಗಳನ್ನು ಮಧ್ಯೇ ಮಧ್ಯೇ ಜೋಡಿಸಿಬಿಡುತ್ತಾರೆ: "ಚೈನಾ ನಮ್ಮ ಮೇಲೆ ಧಾಳಿ ಮಾಡಿಬಿಟ್ಟಿತು. ಇಲ್ಲದಿದ್ದರೆ ರಾಜ್ಯಾಂಗ ತಿದ್ದುಪಡಿಯಾಗಿ ಭೂಸುಧಾರಣೆ ಆಗುತ್ತಾ ಇತ್ತು" ಎಂದು. ಚೈನಾ ಧಾಳಿ ಮಾಡಿರಬಹುದು.

Leave of Absence.

Mr. SPEAKER.—Now, it is 3 o'clock. Before we adjourn, I want to bring a matter to the notice of the House which I forget to do.

I have received a letter from Srimathi Murari Kamalamma, a Member of the Assembly, requesting leave of absence from the House for the current session owing to ill-health.